# ಹಸ್ತರೇಖೆಯ ಆಸುಪಾಸು...



ರಾಜ್ಯ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅಭಯಹಸ್ತ ಹೆಸರಿನ ಚಿತ್ರವೊಂದು ಸುದ್ದಿಮಾಡುತ್ತಿದೆ. ಪಿ.ಬಿ. ನವೀನ್ ನಿರ್ದೇಶನದ ಈ ಚಿತ್ರದ ಪ್ರಥಮಪ್ರತಿ ಸಿದ್ಧವಾಗಿದ್ದು, ಸಿನಿಮಾ ತೆರೆಕಾಣುವ ಸಿದ್ಧತೆ ನಡೆಸುತ್ತಿದೆ.

ಪುನೀತ್ ರಾಜ್‌ಕುಮಾರ್ 'ಅಭಯಹಸ್ತ' ಚಿತ್ರದ ವಿಶೇಷ ಪೋಸ್ಟರ್ ಅನ್ನು ಕಳೆದ ವಾರ ಅನಾವರಣಗೊಳಿಸಿದರು. ನಿರ್ದೇಶಕರ ಪ್ರಕಾರ ಇದೊಂದು ಸೆಲ್ಫಿ ಪೋಸ್ಟರ್. ಮಾಮೂಲಿಯಾಗಿ ನೋಡಿದರೆ ಈ ಪೋಸ್ಟರ್ ಗೊಂದಲ ಹುಟ್ಟಿಸುತ್ತದಂತೆ. ಸೆಲ್ಫಿ ತೆಗೆದುಕೊಂಡಾಗ ಅಥವಾ ಕನ್ನಡಿಯಲ್ಲಿ ನೋಡಿದಾಗಷ್ಟೇ ಇದು ಸರಿಯಾಗಿ ಕಾಣಿಸುತ್ತದೆ ಎನ್ನುವ ನಿರ್ದೇಶಕರು, ಕನ್ನಡ ಚಿತ್ರರಂಗದಲ್ಲಿ ತಮ್ಮ ಚಿತ್ರದ್ದೇ ಪ್ರಥಮ ಸೆಲ್ಫಿ ಪೋಸ್ಟರ್ ಎಂದು ಹೇಳುತ್ತಾರೆ.

ಅಭಯಹಸ್ತದ ತಾರಾಗಣ ಆಕರ್ಷಕವಾಗಿದೆ. 'ಪಾರು ಐ ಲವ್ ಯು' ಚಿತ್ರದ ನಾಯಕ ನಟ ರಂಜನ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಶೇಷ ಇರುವುದು – ಲೇಖಕರಾದ ಚಂಪಾ, ದೊಡ್ಡರಂಗೇಗೌಡ, ಜಿ.ಕೆ. ಗೋವಿಂದರಾವ್ ಅವರು ನಟಿಸಿರುವುದರಲ್ಲಿ. ಇವರ ಜೊತೆಗೆ ವಾಟಾಳ್ ನಾಗರಾಜ್, ಹುಲಿಕಲ್ ನಟರಾಜ್, ಜೇದ್ರಳ್ಳಿ ಕೃಷ್ಣಪ್ಪ ಕೂಡ ಕಲಾವಿದರ ಪಟ್ಟಿಯಲ್ಲಿದ್ದಾರೆ.

ನಿರ್ದೇಶನದ ಜೊತೆಗೆ ನವೀನ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಛಾಯಾಗ್ರಹಣ ಹಾಗೂ ಸಂಕಲನವೂ ಅವರದೇ. ಪ್ರವೀಣ್ ಹಾಗೂ ಕಾರ್ತಿಕ್ ವೆಂಕಟೇಶ್ ಸಂಗೀತ ಸಂಯೋಜಿಸಿದ್ದಾರೆ.



# ಥ್ರಿಲ್ಲರ್ ಶಿವ!

'ಮುಂಗಾರುಮಳೆ' ಮೂಲಕ ಗಾಂಧಿನಗರದಲ್ಲಿ ನೆಲೆ ಕಂಡುಕೊಂಡವರಲ್ಲಿ ಗೀತರಚನೆಕಾರ ಹೃದಯಶಿವ ಕೂಡ ಒಬ್ಬರು. ಇಂಪಾದ ಹಾಡುಗಳಿಗೆ ಪ್ರಸಿದ್ಧರಾದ ಅವರು ಈಗ ನಿರ್ದೇಶನದ ಮೂಲಕ ಪ್ರೇಕ್ಷಕರನ್ನು ಬೆಚ್ಚಿಬೀಳಿಸಲು ಹೊರಟಿದ್ದಾರೆ. ಹೃದಯಶಿವ ನಿರ್ದೇಶನದ ಚೊಚ್ಚಿಲ ಸಿನಿಮಾ ಜಯಮಹಲ್ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಏ. 6ರಂದು ತೆರೆಗೆ).

'ಜಯಮಹಲ್' ಎನ್ನುವ ಅರಮನೆಯಲ್ಲಿ ನಡೆಯುವ ಕಥೆ ಪ್ರೇಕ್ಷಕರನ್ನು ಸೀಟಿನ ಅಂಚಿಗೆ ಬರುವಂತೆ ಮಾಡುವಷ್ಟು ಪರಿಣಾಮಕಾರಿಯಾಗಿದೆಯಂತೆ. ಬೆಂಗಳೂರು, ರಾಮನಗರ, ಕನಕಪುರ ಹಾಗೂ ತಮಿಳುನಾಡಿನ ಪಳನಿಯಲ್ಲಿ ಚಿತ್ರದ ಶೂಟಿಂಗ್ ನಡೆದಿದೆ. ಕನ್ನಡದ ಜೊತೆಗೆ ತಮಿಳಿನಲ್ಲೂ ಸಿನಿಮಾ ರೂಪುಗೊಂಡಿದೆ.

ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ ರಾಜಕುಟುಂಬವೊಂದರಲ್ಲಿ ಉಂಟಾಗುವ ಅಹಿತಕರ ಘಟನೆಗಳ ಫಲಿತಾಂಶ ವರ್ತಮಾನದಲ್ಲಿ ಪ್ರತಿಫಲಿಸುವುದು 'ಜಯಮಹಲ್' ಚಿತ್ರದ ಕಥೆ. ಪ್ರೇತಾತ್ಮದ ರೂಪ ತಾಳಿರುವ ರಾಜಮಾತೆಯ ಚೀರುವಿಕೆ ಸಿನಿಮಾದ ನಂತರವೂ ಪ್ರೇಕ್ಷಕರನ್ನು ಕಾಡಲಿದೆಯಂತೆ. ಹಾರರ್ ಸಿನಿಮಾದಲ್ಲೂ ಮನಸ್ಸಿಗೆ ಮುದ ನೀಡುವ ಹಲವು ಸಂಗತಿಗಳಿಗೆ ಎನ್ನುವುದು ಚಿತ್ರತಂಡದ ಅನಿಸಿಕೆ.

ನೀನಾಸಂ ಅಶ್ವತ್ಥ್, ಶುಭಾ ಪೂಂಜಾ, ಕರಿಸುಬ್ಬು, ಕೌಸಲ್ಯ ಹಾಗೂ ಸ್ಪರ್ಶ ತಾರಾಗಣದಲ್ಲಿರುವ ಪ್ರಮುಖರು. ನಾಗಾರ್ಜುನರ ಛಾಯಾಗ್ರಹಣ ಹಾಗೂ ಜೂಡಾ ಸ್ಯಾಂಡಿ ಸಂಗೀತ ಸಂಯೋಜನೆ ಚಿತ್ರದಲ್ಲಿದೆ. ನಿರ್ದೇಶಕರು ಕೂಡ ಪುಟ್ಟದೊಂದು ಪಾತ್ರದಲ್ಲಿ ನಟಿಸಿದ್ದಾರಂತೆ.

■ ರಘು